**DECEMBER 6,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಸಂವಿಧಾನ ಶಿಲ್ಪಿ, ಭಾರತ ರತ್ನ, ಡಾಕ್ಟರ್ ಭೀಮರಾವ ರಾಮಜೀಸಕ್ವಾಲ್** ಅಂಬೇಡ್ಕರ ಅವರ, 68ನೇ ಮಹಾಪರಿನಿರ್ವಾಣ ದಿನದ ಅಂಗವಾಗಿ, ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿರುವ, ಬಾಬಾಸಾಹೇಬರ ಪುತ್ಥಳಿಗೆ, ಇಂದು ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಸಮಾಜ ಕಲ್ಯಾಣ ಖಾತೆ ಸಚಿವ ಎಚ್.ಸಿ ಮಹದೇವಪ್ಪ, ಶ್ರದ್ಧಾ ಸುಮನಗಳನ್ನು ಸಮರ್ಪಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ, ಬಾಬಾಸಾಹೇಬರ ಸ್ಮತಿಗೆ ಗೌರವಾರ್ಪಿಸಿ, "ಜಾತಿ ಮತ್ತು ಲಿಂಗ ಅಸಮಾನತೆ, ಶೋಷಣೆಯ ವಿರುದ್ಧದ ಹೋರಾಟಕ್ಕೆ, ಶಿಕ್ಷಣ, ಸಂಘಟನೆ ಹಾಗೂ ಹೋರಾಟ ಎಂಬ ಮೂರು ಮಂತ್ರಗಳನ್ನು, ಜಗತ್ತಿನ ಎಲ್ಲ ಶೋಷಿತ ವರ್ಗಕ್ಕೆ ನೀಡಿದವರು, ಯುಗ ಪುರುಷ, ಡಾಕ್ಟರ್ ಬಾಬಾಸಾಹೇಬ ಅಂಬೇಡ್ಕರ; ಅವರ ಚಿಂತನೆ, ಬೆಳಕು ಬೀರಿ, ಬದುಕಿನ ದಾರಿ ತೋರಿಸಿ, ಸಾರ್ವಜನಿಕ ಜೀವನದಲ್ಲಿ ಕೈ ಹಿಡಿದು ಮುನ್ನಡೆಸಿದ ಅರಿವಿನ ಬೆಳಕಿಗೆ, ಮಹಾಪರಿನಿರ್ವಾಣ ದಿನವಾದ ಇಂದು, ನಮಿಸುವುದಾಗಿ" ಹೇಳಿದ್ದಾರೆ.

<><><>

**ಧಾರವಾಡದ, ಆಲೂರ ವೆಂಕಟರಾವ ವೃತ್ತದಲ್ಲಿರುವ,** ಬಾಬಾಸಾಹೇಬರ ಪುತ್ಥಳಿಗೆ, ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು, ಗಣ್ಯರು, ವಿವಿಧ ಸಂಘಟನೆಗಳ ಕಾರ್ಯಕರ್ತರು, ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು. **ರಾಜ್ಯದ ಎಲ್ಲ ಸರ್ಕಾರಿ ಕಚೇರಿಗಳಲ್ಲಿ,** ಶಾಲಾ–ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ, ಡಾಕ್ಟರ್ ಬಾಬಾಸಾಹೇಬ ಅಂಬೇಡ್ಕರ ಅವರಿಗೆ, ಗೌರವಾರ್ಪಿಸಿದ ವರದಿಗಳು ಬಂದಿವೆ.

<><><>

**'ಮಣ್ಣಿನ ಆರೈಕೆ'** ಎಂಬ ಧ್ಯೇಯದೊಂದಿಗೆ, ಮಣ್ಣು ಆರೋಗ್ಯ ದಿನಾಚರಣೆ ರಾಜ್ಯಾದ್ಯಂತ ಆಯೋಜಿಸಿದ, ವರದಿಗಳು ಬಂದಿವೆ. ಗದಗ ಜಿಲ್ಲೆ, ಹುಲಕೋಟಿಯ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿತ, ವಿಶ್ವ ಮಣ್ಣು ದಿನಾಚರಣೆ ಹಾಗೂ ರೈತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ, ಮಾತನಾಡಿದ, ಕೃಷಿ ಇಲಾಖೆ ನಿರ್ದೇಶಕಿ, ಸ್ಫೂರ್ತಿ ಜಿ.ಎಸ್. ಅವರು, ಕೃಷಿಗೆ ಮಣ್ಣು ಮಹತ್ವಪೂರ್ಣ ನೈಸರ್ಗಿಕ ಸಂಪನ್ಮೂಲವಾಗಿದೆ. ಮುಂದಿನ ಪೀಳಿಗೆಗೆ ನಾವು ಆರೋಗ್ಯಕರ ಮಣ್ಣನ್ನು ಆಸ್ತಿಯಾಗಿ ಉಳಿಸಬೇಕಿದೆ ಎಂದರು. ಮಣ್ಣಿನಲ್ಲಿರುವ ಸಾವಯವ ಇಂಗಾಲ ಕ್ಷೀಣಿಸುತ್ತಿದ್ದು, ಮಣ್ಣನ್ನು ಪರೀಕ್ಷಿಸಿಕೊಂಡು, ರೈತರು 'ಮಣ್ಣು ಆರೋಗ್ಯ ಚೀಟಿ' ಪಡೆದುಕೊಂಡು, ಶಿಫಾರಸಿಗೆ ಅನುಗುಣವಾಗಿ, ಮಣ್ಣಿಗೆ ಅಗತ್ಯ ಸಾವಯವ ಗೊಬ್ಬರ, ಮತ್ತು ಪೋಷಕಾಂಶಗಳನ್ನು ಸೇರಿಸಬೇಕು ಎಂದರು.

<><><>

**ಪ್ರಕೃತಿ ವಿಕೋಪದಿಂದ ಸಂಭವಿಸುವ,** ಬೆಳೆ ಹಾನಿಗೆ ಸೂಕ್ತ ಪರಿಹಾರ ಒದಗಿಸಲು, ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿ ಯೋಜನೆ ಅಡಿ, ಬೆಳೆ ವಿಮೆ, ಕನಿ ್ಠ ಬೆಂಬಲ ಬೆಲೆ, ಮತ್ತು ಫಲಾನುಭವಿ ಆಧಾರಿತ ಯೋಜನೆಗಳನ್ನು ಅನು ್ಠಾನಗೊಳಿಸಲು, ಬೆಳೆ ಸಮೀಕ್ಷೆ ನಡೆಸಲಾಗುತ್ತಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. 2024–25 ನೇ ಸಾಲಿಗೆ, 255 ಲಕ್ಷ 32 ಸಾವಿರ ಕೃಷಿ ತಾಕುಗಳನ್ನು ಸಮೀಕ್ಷಿಸಿ, ರೈತರಿಗೆ ಆರ್ಥಿಕ ಸಹಾಯ ಒದಗಿಸಲು ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು, ಅವರು, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಹೇಳಿದ್ದಾರೆ.

<><><>

**ಧಾರವಾಡ ಜಿಲ್ಲೆಯಾದ್ಯಂತ, 2023–24ನೇ** ಸಾಲಿನಲ್ಲಿ, 2 ಸಾವಿರದ 200 ಜನ ರೈತರು, ಸಿರಿಧಾನ್ಯ ಬೆಳೆದು, 2 ಕೋಟಿಗೂ ಹೆಚ್ಚು ಪ್ರೋತ್ಸಾಹ ಧನವನ್ನು ಪಡೆದಿದ್ದಾರೆ ಎಂದು, ಕೃಷಿ ಇಲಾಖೆ ಜಂಟಿ ನಿರ್ದೇಶಕ, ಮಂಜುನಾಥ ಅಂತರವಳ್ಳಿ ಹೇಳಿದ್ದಾರೆ. ಕಡಪಾ ಮೈದಾನದಿಂದ ಕರ್ನಾಟಕ ಕಾಲೇಜು ವೃತ್ತದ ವರೆಗೆ ಆಯೋಜಿಸಿದ್ದ, 'ಸಿರಿಧಾನ್ಯ ನಡಿಗೆ ಆರೋಗ್ಯದ ಕಡೆಗೆ' ಜಾಥಾಕ್ಕೆ, ಚಾಲನೆ ನೀಡಿ, ಅವರು ಮಾತನಾಡಿದರು. ಸಿರಿಧಾನ್ಯ ಬೆಳೆಯುವಲ್ಲಿ, ಕಲಘಟಗಿ ತಾಲೂಕು ಮುಂಚೂಣಿಯಲ್ಲಿದ್ದು, ಸಾವಿರದ 500ಕ್ಕೂ ಹೆಚ್ಚು ಜನ ರೈತರು, ಪವಾಡ ಧಾನ್ಯ ಬೆಳೆದಿದ್ದಾರೆ ಎಂದರು. ರೈತ ಸಿರಿ ಯೋಜನೆಯಡಿ, ಸಿರಿಧಾನ್ಯ ಬೆಳೆಗಾರರಿಗೆ, ಪ್ರತಿ ಹೆಕ್ಟರ್‌ಗೆ 10 ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

<><><>

**ಭಾರತೀಯ ವಾಣಿಜ್ಯ ಮಂಡಳಿ,** ಬಿಹಾರ ಸರ್ಕಾರದ ಸಹಯೋಗದಲ್ಲಿ, ಬೆಂಗಳೂರಿನ ಅರಮನೆ ಮೈದಾನದಲ್ಲಿ, ಇಂದು ಮತ್ತು ನಾಳೆ, ಮಖಾನಾ ಮಹೋತ್ಸವ ಆಯೋಜಿಸಿದೆ. ‘ನರಿ ನಟ್ಸ್’ ಎನ್ನಲಾಗುವ ಮಖಾನಾ, ಬಿಹಾರದ ಪ್ರಮುಖ ಕೃಷಿ ಉತ್ಪನ್ನವಾಗಿದ್ದು, ಪೌಷ್ಟಿಕಾಂಶಯುಕ್ತ ಮಖಾನಾ, ವಿಶೇ ‘ವಾಗಿ ಮಿಥಿಲಾ ಪ್ರದೇಶದಲ್ಲಿ ಹೆಚ್ಚು ಬೆಳೆಯಲಾಗುತ್ತದೆ. **ಇಂದು** ಬೆಳಗ್ಗೆ 11:30 ರಿಂದ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ.

<><><>

**ಬೆಂಗಳೂರು ವಿಶ್ವವಿದ್ಯಾಲಯದ,** ಜ್ಞಾನಭಾರತಿ ಆವರಣದ ಮೂಲಕ ಹಾದು ಹೋಗುವ, ವೃ ‘ಭಾವತಿ ನದಿ ನೀರನ್ನು ಸ್ವಚ್ಛಗೊಳಿಸಲು, ಕಾರ್ಯಯೋಜನೆ ರೂಪಿಸಲು ಒಡಂಬಡಿಕೆ ಸಿದ್ಧವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ನೀತಿ ಸಂಶೋಧನಾ ಸಂಸ್ಥೆ ಹಾಗೂ ಬೆಂಗಳೂರು ಆರ್ಟ್ ಆಫ್ ಲಿವಿಂಗ್, ಈ ಒಡಂಬಡಿಕೆಗೆ ಸಹಿ ಹಾಕಿದ್ದು, ನದಿ ನೀರಿನಲ್ಲಿನ ಭಾರ ಲೋಹಗಳನ್ನು ಬಳಸಿಕೊಂಡು ಬೆಳೆಯುವ, ನೈಸರ್ಗಿಕ ಸಸ್ಯಗಳನ್ನು ಗುರುತಿಸಿ, ಅವುಗಳನ್ನು ನದಿ ಪಾತ್ರದಲ್ಲಿ ಬೆಳೆಸಲು ಯೋಜನೆ ಸಿದ್ಧ ಪಡಿಸಲಾಗುತ್ತಿದೆ.

<><><>

**ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಯ** ಗುರುಕುಲಗಳಂತಿರುವ, ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಬಲೀಕರಣಕ್ಕೆ, ಶಿಕ್ಷಣ ಇಲಾಖೆಯ ಅಧಿಕಾರಿಗಳು ಬದ್ಧತೆಯಿಂದ ಶ್ರಮಿಸಬೇಕು ಎಂದು, ಧಾರವಾಡ ನಗರದ ‘ಡಿಮ್ಹಾನ್ಸ್’ ಮುಖ್ಯ ಆಡಳಿತಾಧಿಕಾರಿ ಮೇಜರ್ ಸಿದ್ಧಲಿಂಗಯ್ಯ ಎಸ್. ಹಿರೇಮಠ ಹೇಳಿದ್ದಾರೆ. ಧಾರವಾಡದ ಹೆಣ್ಣು ಮಕ್ಕಳ ತರಬೇತಿ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದ್ದ, ಶಿಕ್ಷಣ ಇಲಾಖೆ ಅಯುಕ್ತರ ಕಚೇರಿಯ, ಡಿ.ಡಿ.ಪಿ.ಐ. ಸಂಜೀವ ಬಿಂಗೇರಿ ಅವರ ನಿವೃತ್ತಿ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು. ಉಪ್ಪಿನ ಬೆಟಗೇರಿಯ, ಮೂರುಸಾವಿರ ವಿರಕ್ತಮಠದ ಶ್ರೀಕುಮಾರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>